ಅಧ್ಯಕ್ಷರು : ಮಾನ್ಯ ಸಚಿವರು ಆಹ್ವಾನ ನೀಡಿದ್ದಾರೆ. ದಯವಿಟ್ಟು ಸಾಯಂಕಾಲ ಎಲ್ಲರೂ ಹೋಗಿ ಊಟ ಮಾಡಿಕೊಂಡು ಬನ್ನಿ.

ಶ್ರೀ ಡಿ.ಕೆ. ಶಿವಕುಮಾರ್ : Followed by dinner. ಮಾನ್ಯ ಕುಮಾರಸ್ವಾಮಿಯವರ birthday ಗೋಸ್ಕರ dinner ಕೊಡುತ್ತಿದ್ದೇವೆ.

ಅಧ್ಯಕ್ಷರು : ಆಯಿತು. ಮಾನ್ಯ ಕಾನೂನು ಸಚಿವರೆ, ಬಿಲ್ ತೆಗೆದುಕೊಳ್ಳೋಣವೇ ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್‌ನಲ್ಲಿ ಪಾಸ್ ಆಗಿರುವ ಎರಡು ಬಿಲ್ ಬಿಟ್ಟರೆ ಬೇರೆ ಯಾವುದೇ ಬಿಲ್ ಇಲ್ಲಿ ಪಾಸ್ ಆಗಿಲ್ಲ. ಇಲ್ಲಿಂದ ಬಿಲ್‌ಗಳು ಅಲ್ಲಿಗೆ ಹೋಗಬೇಕು. ಅಲ್ಲಿ ಸ್ವಲ್ಪ ಟೈಂ ಸಹ ಬೇಕಾಗುತ್ತದೆ.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ : ಮಾನ್ಯ ಅಧ್ಯಕ್ಷರೆ, ದಯಮಾಡಿ ನನಗೆ 10 ನಿಮಿಷ ಅವಕಾಶ ಕೊಡಿ. ಆ ನಂತರ ತಾವು ಬಿಲ್ ತೆಗೆದುಕೊಳ್ಳಿ.

ಅಧ್ಯಕ್ಷರು : ನಾನು ಅವಕಾಶ ಕೊಡುತ್ತೇನೆ. ಹೆಚ್ಚೆಂದರೆ ಅರ್ಧಗಂಟೆಯಲ್ಲಿ ಬಿಲ್‌ಗಳನ್ನು ಪೂರೈಸಿ ಬಿಡೋಣ. ಆ ನಂತರ ಒಂದು ಗಂಟೆ ಅವಕಾಶ ಕೊಡುತ್ತೇನೆ.

7. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1. ಕರ್ನಾಟಕ ಪೌರ ಸಭೆಗಳು ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ 2014 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನೆ ಸಚಿವರು) (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಪೌರ ಸಭೆಗಳು ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪಶುಸಂಗೋಪನೆ ಸಚಿವರು) (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, ಈ ಬಿಲ್

ಬಗ್ಗೆ ನಿನ್ನೆ ದಿವಸ ಚರ್ಚೆಯಾಗಿದೆ. ಆ ಚರ್ಚೆಯಾಗಿದೆ. ಆ ಚರ್ಚೆಯ ಹಿನ್ನೆಲೆಯಲ್ಲಿ ನಾನು ಮಾನ್ಯ ಸುರೇಶ್ ಕುಮಾರ್ ಮತ್ತು ಮಾನ್ಯ ರಮೇಶ್ ಕುಮಾರ್‌ರವರ ಜೊತೆ ಕುಳಿತು ಚರ್ಚೆ ಮಾಡಿದ್ದೇನೆ. ಇದು ಸೀಮಿತವಾಗಿತಕ್ಕಂಥ ಒಂದು ಬಿಲ್ ಆಗಿದೆ. Building ಎಂದರೆ, building includes tower on that building. ಆದ್ದರಿಂದ, ಮುನಿಸಿಪಾಲಿಟಿ ಮತ್ತು ಕಾರ್ಪೋರೇಷನ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತರಬೇಕೆಂದು ತೀರ್ಮಾನ ಮಾಡಿ ಈ ಬಿಲ್ ಅನ್ನು ತರಲಾಗಿದೆ. Larger question ಏನಿದೆ ; ಅದನ್ನು ರೂಲ್ಸ್ ಅನ್ನು ಮಾಡುವ ಸಂದರ್ಭದಲ್ಲಿ ಅಂದರೆ, buildings ಗೆ ಬೈಲಾಗಳನ್ನು ಮಾಡುವಂಥ ಸಂದರ್ಭದಲ್ಲಿ ಅವೆಲ್ಲವನ್ನು ಅಳವಡಿಸಿಕೊಳ್ಳುತ್ತೇವೆ ಎಂಬ ಮಾತನ್ನು ಸಹ ಹೇಳಿದ್ದೇವೆ. ಆದ್ದರಿಂದ, ಇದು ಸೀಮಿತವಾಗಿರತಕ್ಕಂಥ ವಿಚಾರವಾಗಿದೆ.

ಅಧ್ಯಕ್ಷರು : ಇದಕ್ಕೆ ಮಾನ್ಯ ಸುರೇಶ್ ಕುಮಾರ್‌ರವರು ಮತ್ತು ಇತರರು ಚರ್ಚೆ ಮಾಡುವಂಥ ಕಾಲದಲ್ಲಿ ವಿಶೇಷವಾಗಿ ಗಮನ ಸೆಳೆದಿರುವಂಥದ್ದು ಬಹಳ ಮುಖ್ಯವಾದ ವಿಚಾರವಾಗಿದೆ. ಆದ್ದರಿಂದ, ದಯವಿಟ್ಟು ನಿಯಮಾವಳಿಗಳನ್ನು ರಚನೆ ಮಾಡತಕ್ಕಂಥ ಸಂದರ್ಭದಲ್ಲಿ ಅವರ ಸಲಹೆಗಳನ್ನು ಅಳವಡಿಸಿಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ : ನಿಯಮಗಳನ್ನು ಮುಂದಿನ ಸದನದಲ್ಲಿ ಜನವರಿ–ಫೆಬ್ರವರಿಯಲ್ಲಿ ಮಂಡನೆ ಮಾಡುತ್ತೇನೆ.

ಅಧ್ಯಕ್ಷರು : ಅದನ್ನು ಮಾಡುವುದಕ್ಕಿಂತ ಪೂರ್ವಭಾವಿಯಾಗಿ ದೊಡ್ಡ ನಗರಗಳಿಂದ ಬರತಕ್ಕಂಥ ಮುಖ್ಯವಾಗಿ ಶಾಸಕರು ಇದ್ದಾರೆ, ಆ 4–5 ಜನರನ್ನು ಮಂಗಳೂರು ಶಾಸಕರು ಮತ್ತು ಸುರೇಶ್ ಕುಮಾರ್‌ರವರು ಕೆಲವು ಬೆಳಗಾವಿ ಶಾಸಕರನ್ನು ಕರೆದು ಅವರ ಜೊತೆ ಚರ್ಚೆ ಮಾಡಿ ದಯವಿಟ್ಟು ನಿಯಮಗಳನ್ನು ರೂಪಿಸಬೇಕು. ದಯವಿಟ್ಟು ಅದೊಂದು ನೀವು ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ : ಆ responsibility ಅನ್ನು ನಾನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : OK

ಡಾ॥ ಸಿ.ಎನ್. ಅಶ್ವತ್ಥ ನಾರಾಯಣ : Act ನಲ್ಲಿ ಇಲ್ಲದೇ ಇರುವುದನ್ನು ರೂಲ್ಸ್‌ನಲ್ಲಿ ಏನು ಮಾಡುತ್ತಾರೆ. ಇದು ಸಾಮಾನ್ಯವಾಗಿರುವಂಥದ್ದು ಅಲ್ಲ. ಬಹಳ ದೊಡ್ಡ ಸಮಸ್ಯೆ ಎಲ್ಲಾ ಬಡಾವಣೆಯಲ್ಲಿಯೂ ಏನೊಂದು license ಮತ್ತು building plan ಮೇಲೆ.

ಅಧ್ಯಕ್ಷರು : ಈಗ Act ನಲ್ಲಿ ಎಷ್ಟು permissible ಇದೆ, to that extent, keeping that in view, let them prepare a rule. Let them examine it.

ಡಾ॥ ಸಿ.ಎನ್. ಅಶ್ವತ್ಥನಾರಾಯಣ : Tax ಗೆ provision ಕೊಟ್ಟಾದ ಮೇಲೆ ಇವರಿಗೆ ಎಲ್ಲೋ ಒಂದು ಕಡೆ legal stand ಕೊಟ್ಟಂತಾಗುತ್ತದೆ. Government of India ದಲ್ಲೂ ಇವರಿಗೆ ...

ಅಧ್ಯಕ್ಷರು : ಕೆಲವು ವಿಷಯ ಕೂಡ ನಮಗೂ ಅನಿಸಿತ್ತು. ಏಕೆಂದರೆ, ಟವರ್ ಹಾಕುವುದು ಇದೆಯಲ್ಲಾ, ಮನುಷ್ಯರ ಮೇಲೆ ಬಹಳ ದುಷ್ಪರಿಣಾಮ ಬೀರುತ್ತದೆ, ಡಾಕ್ಟರಾದ ತಮಗೆ ಇದು ಗೊತ್ತಿದೆ. ನಾನು High tension ಅಡಿಯಲ್ಲಿ ಓಡಾಡುವುದಿಲ್ಲ. ಹಾಗೆ ಅವರು ಹೇಳಿದ್ದಾರೆ. ಅದಕ್ಕೋಸ್ಕರ health ದೃಷ್ಟಿಯಿಂದ ಎಷ್ಟು ಸುರಕ್ಷಿತವಾಗಿ ಇದನ್ನು ಮಾಡುವುದಕ್ಕಾಗುತ್ತದೆಯೋ ಅದಕ್ಕೆ ನಿಯಮಗಳನ್ನು ಮಾಡುವಾಗ ನಿಯಮಗಳಲ್ಲಿ ಗಮನದಲ್ಲಿಟ್ಟುಕೊಳ್ಳಿ ಎಂದು ಹೇಳಿದ್ದಾರೆ, ಅದಕ್ಕೆ ಸಲಹೆಗಳನ್ನು ಕೊಟ್ಟಿದ್ದಾರೆ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ : ಇದುವರೆಗೂ ಎಲ್ಲಾ ಕಡೆ ಏನು tower ಗಳನ್ನು install ಮಾಡಿದ್ದಾರೆ, ಯಾವ ಒಂದು ಕಾನೂನಿನ ಚೌಕಟ್ಟಿನಲ್ಲಿ, ಯಾವುದೂ ಇಲ್ಲದೇನೆ arbitrary ಆಗಿ ಎಲ್ಲಾ ಕಡೆಯಿಂದಲೂ install ಬೆಂಗಳೂರಿನಲ್ಲಿ ಮಾಡಿಕೊಂಡು ಬಂದು ಬಿಟ್ಟಿದ್ದಾರೆ. ಯಾರು ಹೇಳುವವರು ಕೇಳುವವರು ಇಲ್ಲದಂತಾಗಿದೆ. ಈಗ ಇವರು ಟ್ಯಾಕ್ಸ್ ಹಾಕಲಿಕ್ಕೆ ಏನು ಮಾಡುತ್ತಿದ್ದಾರೆ ಎಂದರೆ ಅಕ್ರಮವಾಗಿ structure ಅನ್ನು ಸಕ್ರಮ ಮಾಡಿಕೊಡುತ್ತಿದ್ದಾರೆ. Tax ಹಾಕಲಿಕ್ಕೆ ಈ ರೀತಿ ಮಾಡುತ್ತಿದ್ದಾರೆ. Revenue ಏರಿಯಾದಲ್ಲಿ ಇವರು tax ನ್ನೇ collect ಮಾಡುವುದಿಲ್ಲ.

ಅಧ್ಯಕ್ಷರು : ಈಗ ಪ್ರಶ್ನೆ ಬಂದಿರುವುದು ಅಷ್ಟೆ, ಈಗ ನೀವು ಹೇಳಿದ ರೀತಿಯಲ್ಲಿ ಅನೇಕ ರೀತಿಯಲ್ಲಿ ಆಗಿರುತ್ತವೆ. ಯಾವ norm ಇಲ್ಲ, ಯಾವ technical line ಲ್ಲೂ ಇಲ್ಲ. ಅದನ್ನು regularize ಮಾಡುವುದಕ್ಕೆ ಒಂದು ನಿಯಮ ಬೇಕಾಗುತ್ತದೆ. ಆ ದೃಷ್ಟಿಯಿಂದ ಮಾಡುತ್ತಿದ್ದೇವೆಂದು ಅವರು ಹೇಳುತ್ತಿದ್ದಾರೆ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ : ದಯವಿಟ್ಟು ಇದು ಬಹಳ ಹಗುರವಾಗಿ ಇರುವಂಥದ್ದು ಅಲ್ಲ ಎನ್ನುವಂಥದ್ದು ತಮಗೆ ಗೊತ್ತಿದೆ. ಇವತ್ತು ರೆವಿನ್ಯೂ ಏರಿಯಾದಲ್ಲಿರುವಂಥ ಮನೆಗಳಿಗೆ ನಾವು ಟ್ಯಾಕ್ಸ್ ಕಲೆಕ್ಟ್ ಮಾಡುವುದಿಲ್ಲ. Legal status ಇಲ್ಲವೆಂದು.

ಅಧ್ಯಕ್ಷರು : ನಾನು ಒಂದನ್ನು ಹೇಳುತ್ತೇನೆ ಕೇಳಿ. ನಮ್ಮ administrative inefficiency ಯಿಂದ ಇವೆಲ್ಲಾ ನಡೆಯುತ್ತವೆ. ನಾವು honest ಆಗಿ, dedicated ಆಗಿ ಆಡಳಿತವನ್ನು ಕೊಟ್ಟರೆ ಇವೆಲ್ಲವನ್ನು regulate ಮಾಡುವುದಕ್ಕೆ ಬರುತ್ತದೆ. ಅವ್ಯವಸ್ಥೆ ಇಲ್ಲಿ ಎದ್ದಿದೆ, ಆ ಕಾರಣಕ್ಕೋಸ್ಕರ

ನಮಗೆ ನಿಮಗೆ ಹಾಗೆ ಅನಿಸುತ್ತದೆ. ಈ ವ್ಯವಸ್ಥೆಯಲ್ಲಿಯೇ ನಾವು ಪಾರಾಗಿ ಬರಬೇಕಾಗುತ್ತದೆ. ಅದಕ್ಕೋಸ್ಕರ ಆ ನಿಯಮ ಮಾಡುವಾಗ ನಿಮ್ಮನ್ನು ಇಟ್ಟುಕೊಂಡು ಅದನ್ನು ಎಷ್ಟರಮಟ್ಟಿಗೆ ಕಂಟ್ರೋಲ್ ಮಾಡುವುದಕ್ಕಾಗುತ್ತದೆ ಅದನ್ನು ಮಾಡೋಣ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ : Control ಅಲ್ಲ regularize ಮಾಡಿ ಕೊಡುತ್ತಿದ್ದಾರೆ.

ಅಧ್ಯಕ್ಷರು : ಹಾಗಾದರೆ ಏನು ಮಾಡಬೇಕು ಎನ್ನುವುದನ್ನು ನೀವೇ ಹೇಳಿ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ : ಟವರ್ ಹಾಕುವುದಕ್ಕೆ ಇವರು ಕಾನೂನು ಏನು ಎನ್ನುವುದನ್ನೇ ಮಾಡಿಲ್ಲ. ಇವರು ಟವರ್ ಹಾಕಿರುವವರಿಗೆ regularize ಮಾಡಿಕೊಡುವುದು ಆಗುತ್ತಿದೆ. ಇದನ್ನು install ಮಾಡುವುದಕ್ಕೆ regulation ಒಂದನ್ನು ಮಾಡಬೇಕು ಅಲ್ಲವೆ ? ಈಗ Town Planning Act ನಲ್ಲಿ ಅವಕಾಶ ಮಾಡಿ regulate ಮಾಡಿ...

ಅಧ್ಯಕ್ಷರು : ನಿಮ್ಮ ಅಭಿಪ್ರಾಯ ಏನು ಇದೆ ಇನ್ನುವುದನ್ನು ಹೇಳಿ.

ಶ್ರೀ ಸಿ.ಟಿ. ರವಿ : Distance ಎಷ್ಟು ಇರಬೇಕು, building structure ಏನು ಇರಬೇಕು, ಇದು ಏನನ್ನು ಹೇಳದೆ, ಕೇವಲ tax collectionಗೆ ಅರ್ಜೆಂಟ್ ಏನು ? ಇಷ್ಟು ವರ್ಷ ಮಾಡಿಲ್ಲ, ಇನ್ನೂ ಹತ್ತು ವರ್ಷ ಹೋಗಲಿ ಬಿಡಿ. ಏನು ಸಾವಿರಾರು ಕೋಟಿ ದುಡ್ಡು ಬರುತ್ತದೆ ಏನು ?

ಶ್ರೀ ಎಲ್.ಎ. ರವಿ ಸುಬ್ರಹ್ಮಣ್ಯ : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಇದೊಂದು ದೊಡ್ಡ ಸಮಸ್ಯೆ ಆಗಿದೆ.

ಡಾ॥ ಸಿ.ಎನ್. ಅಶ್ವತ್ಥನಾರಾಯಣ : ಟ್ಯಾಕ್ಸ್‌ನಿಂದ ಎಷ್ಟು revenue ಬರುತ್ತದೆಂದು ಅವರು ಹೇಳಲಿ.

ಅಧ್ಯಕ್ಷರು : ಅವರು ಏನು ಹೇಳುತ್ತಾರೋ ಹೇಳಲಿ ನೋಡೋಣ.

ಶ್ರೀ ಟಿ.ಬಿ. ಜಯಚಂದ್ರ : Municipalities and Corporation Act ಗೆ amendment ತಂದಿರುವ ಉದ್ದೇಶವೆಂದರೆ, ಒಂದು Writ Petition No. 1/2011 & 551-552/2011 ನಲ್ಲಿ ಒಂದು Division Bench ನ Order ಏನಿದೆ ಎಂದರೆ except..

ಡಾ॥ ಸಿ.ಎನ್. ಅಶ್ವತ್ಥನಾರಾಯಣ : Petitioner ಯಾರು ಎಂದು ಸ್ವಲ್ಪ ಹೇಳಿ ಬಿಡಲಿ ಆಗ ನಮಗೆ ಗೊತ್ತಾಗಿ ಬಿಡುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : Wireless . ಇವರು petitioners. It is a judgment of Division Bendh. Chief Justice of High Court ಇರತಕ್ಕಂಥದ್ದರಲ್ಲಿ Wireless

I.T. Infoservices Ltd. Vs. State of Karnataka, Director of Municipal Administration, ಈ Division Bench Judgment ನಲ್ಲಿ ಅಂತಿಮವಾಗಿ ಏನು ತೀರ್ಮಾನವಾಗುತ್ತದೆಂದರೆ, "except of course saving the liberty reserved to the respondent to enact such amendment in accordance with law. In any event with regard to the amendments to be made, the official respondents have not assailed the portion of the order passed by the learned Single Judge. They have conceded to the position that the amendments are necessary to be made." What is the amendment ? ಅಂದರೆ, ಒಂದು ಕಟ್ಟಡವೆಂದು ಹೇಳಿದರೆ, ಕಟ್ಟಡದ ಮೇಲೆ ಇರತಕ್ಕಂಥ superstructure ಆ ಟವರ್ ಹಾಕಿರುವಂಥದ್ದು ಸೇರಿ ಅದಕ್ಕೆ include ಮಾಡುವುದಕ್ಕೆ ಆ ಬಿಲ್ಡಿಂಗ್ ಸೇರಿಸಬೇಕು. ಅದನ್ನು ಬಿಲ್ಡಿಂಗ್‌ಗೆ ಸೇರಿಸಿ ಅವರಿಗೆ ಪ್ರತಿ ವರ್ಷ ಟ್ಯಾಕ್ಸ್ ಹಾಕುವಂಥ ಸಂದರ್ಭದಲ್ಲಿ ಅದನ್ನು ಅಸೆಟ್ ಅನ್ನು ತೆಗೆದುಕೊಂಡು tax ನ್ನು assess ಮಾಡಬೇಕು ಎನ್ನುವಂಥದ್ದು ಅಮೆಂಡ್‌ಮೆಂಟಿನ ಸಾರಾಂಶ. ಇಲ್ಲಿ ಮುಖ್ಯವಾಗಿ ಬಂದಿರತಕ್ಕಂಥದ್ದು ನೀವು ಹೇಳಿರತಕ್ಕಂಥದ್ದನ್ನು ನಾನು ಒಪ್ಪುತ್ತೇನೆ. ಇದರಿಂದ health ನಲ್ಲಿ problem ಆಗುತ್ತದೆ ಎನ್ನತಕ್ಕಂಥದ್ದು. ಬಿಲ್ಡಿಂಗ್‌ಗೆ ಏನು ಎನ್ನತಕ್ಕಂಥದ್ದರ ಬಗ್ಗೆ ಅಮೆಂಡ್‌ಮೆಂಟ್ ತರತಕ್ಕಂಥದ್ದನ್ನು ಬಿಟ್ಟರೆ ಬೇರೆ ಯಾವುದಕ್ಕೂ ಅಲ್ಲ. ಇದರಲ್ಲಿ ನಿಮಗೆ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಎಲ್ಲವೂ ಕೂಡ ಕೇಂದ್ರ ಸರ್ಕಾರದ ಒಕ್ಕಣೆ ಏನು ಇದೆ ಎನ್ನುವುದನ್ನು ಹೇಳಿ ಬಿಡುತ್ತೇನೆ. Department of Communication, advisory guidelines for State Government for issue of clearances for installation of moblile towers. ಆ mobile towers ಗೆ guidelines ಅನ್ನು ಕೊಟ್ಟಿದ್ದಾರೆ. ಆ guidelines ನ್ನು ಯಾವುದನ್ನು ನಾವು ಅಡಕ ಮಾಡಬಹುದು ಎಂದರೆ, ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ, ಮಾನ್ಯ ಸುರೇಶ್ ಕುಮಾರ್ ಅವರನ್ನು ನಾವು ಅಭಿನಂದಿಸಬೇಕಾಗುತ್ತದೆ. ಇದನ್ನು 3-4 ಬಾರಿ ಚರ್ಚೆಯನ್ನು ಮಾಡಿದ್ದರು. ಆ ಚರ್ಚೆ ಮಾಡಿದ ಹಿನ್ನೆಲೆಯಲ್ಲಿ ನಾನು ಎರಡು ಬಾರಿ ಚರ್ಚೆಯನ್ನು ನಾನು ಮಾಡಿದ್ದೇನೆ. ಇದಕ್ಕೆ ಏನಾದರೊಂದು ಕಾನೂನನ್ನು ತರಬೇಕು ಎನ್ನತಕ್ಕಂಥ ಹಿನ್ನೆಲೆಯಲ್ಲಿ ಈಗ ನಾವು building bye-laws ಎಂದು ಏನು ಮಾಡುತ್ತಿದ್ದೇವೆ. Building bye-laws ನಲ್ಲಿ ಎಲ್ಲವನ್ನು ಕೂಡ ಅಡಕ ಮಾಡಬೇಕೆಂದು ತೀರ್ಮಾನವನ್ನು ಮಾಡಿದ್ದೇವೆ. ಅದಕ್ಕೋಸ್ಕರ ಈಗ building bye-laws ಮಾಡುವಂಥ ಸಂದರ್ಭದಲ್ಲಿ ಒಂದು ಅಥವಾ ಎರಡು ತಿಂಗಳಲ್ಲಿ ಇದನ್ನು ತರುವಂಥ ಸಂದರ್ಭದಲ್ಲಿ ಎಲ್ಲ ಪಟ್ಟಣ ಪ್ರದೇಶ ಮತ್ತು ಬೆಂಗಳೂರು ಶಾಸಕರನ್ನು ಕರೆದು ಯಾರ್ಯಾರಿಗೆ ಆಸಕ್ತಿ ಇದೆ, ಅವರ ಜೊತೆಯಲ್ಲಿ

ಚರ್ಚೆ ಮಾಡಿ ಅಂತಿಮವಾಗಿ ತರುತ್ತೇನೆ. ಅದಕ್ಕೆ ಪೂರಕವಾಗಿ ಒಂದನ್ನು ಹೇಳುತ್ತೇನೆ. The Indian telecom sector has witnessed a phenomenal growth and mobile telephony in particular has revolutionized in the country over the past decades providing telephone coverages across the country has been one of the top priority areas. Out of 921 million connections, 891 million connections are wireless as on May 2013. The popularity of cell phones and wireless communication devices has resulted in proliferation of cell towers across the country. ನೀವು ಹೇಳತಕ್ಕಂಥದ್ದು ಎಲ್ಲವೂ ಕೂಡ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್‌ನಲ್ಲಿದೆ. ಇದನ್ನು ಆಕ್ಟ್‌ನಲ್ಲಿ ಏಕೆ ತರುವುದಕ್ಕಾಗುವುದಿಲ್ಲವೆಂದರೆ, ಕೇಂದ್ರ ಸರ್ಕಾರದಲ್ಲಿ ಮಾಡಿರುವ ಕಾನೂನಿನಲ್ಲಿಯೇ ನಾವು ಮಧ್ಯಪ್ರವೇಶ ಮಾಡುವುದಕ್ಕೆ ಬರುವುದಿಲ್ಲ. ಅದು repugnant ಆಗುತ್ತದೆ. ಆ ಕಾರಣಕ್ಕೋಸ್ಕರ ಇಲ್ಲಿ ಕೊಟ್ಟಿರತಕ್ಕಂಥ ಗೈಡ್‌ಲೈನ್ಸ್‌ಗೂ ನಾವು ತರತಕ್ಕಂಥ ಆಕ್ಟ್‌ಗೂ ಇದಕ್ಕೂ ಸಂಬಂಧವಿಲ್ಲ. ನಾವು building bye-laws ಏನು ಮಾಡುತ್ತಿದ್ದೇವೆ, ಅದರ ವ್ಯಾಪ್ತಿಯಲ್ಲಿ ಇದನ್ನು ತರುವಂಥ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಆ ಕಾರಣಕ್ಕೋಸ್ಕರ ನಿಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ. ನಾವು ಎಲ್ಲ ರೀತಿಯಲ್ಲಿಯೂ ಕೂಡ ವೈರ್‌ಲೆಸ್ ಈಗಾಗಲೇ ಆಗಿ ಹೋಗಿಬಿಟ್ಟಿದೆ. ಆಗಿ ಹೋಗಿರತಕ್ಕಂಥದ್ದನ್ನು furureನಲ್ಲಿ ಮಾಡುವಂಥ ಸಂದರ್ಭದಲ್ಲಿ ಏನು ಮಾಡಬೇಕು, ಅದನ್ನು building bye-laws ಸೇರಿಸುವಂತಹ ಕೆಲಸವನ್ನು ಮಾಡುತ್ತೇವೆ. Indirect ಆಗಿ ಅವನ್ನು ಕಂಟ್ರೋಲ್ ಮಾಡುವುದಕ್ಕೋಸ್ಕರ ಇದೆಲ್ಲಾ stringent ಪ್ರಾವಿಷನ್ ತರುತ್ತಿರುವಂಥದ್ದು. ಇದರಲ್ಲಿ ಇನ್ನೊಂದು ಏನು ಇದೆ ಎಂದರೆ, ಅಮೌಂಟ್ ಯಾವಾಗ ಹಾಕಬಹುದು ಎಂದರೆ, ಒಂದೇ ಒಂದು ಸಲ ಹಾಕುವುದಕ್ಕೆ ಗೈಡ್‌ಲೈನ್ಸ್‌ನಲ್ಲಿ ಅವಕಾಶ ಇರುವಂಥದ್ದು. Action by the State Government and Local Bodies. It is prescribed by the Government of India only. Nominal one time administrative fees as may be decided by the State Government to recover its cost on the issue of permission for the installation of tower. ಒಂದು ಸಲ ದುಡ್ಡು ಕೊಟ್ಟ ಮೇಲೆ ಮುಗಿದು ಹೋಯಿತು ಎಂದು ಇವರು ಹೇಳುತ್ತಾರೆ. ಅದಕ್ಕೋಸ್ಕರ ನಾವು ಏನು ಮಾಡಿದ್ದೇವೆಂದರೆ, High Court ನ judgment ಅನ್ನು ಉಪಯೋಗಿಸಿಕೊಂಡು ಆ tower ಕೂಡ building part ಆಗುತ್ತದೆ. ಅದಕ್ಕೆ ವ್ರತಿವರ್ಷ ಟ್ಯಾಕ್ಸ್ ಅನ್ನು ಕಟ್ಟಬೇಕೆಂದು ಕಾನೂನು ತಂದಿರತಕ್ಕಂಥದ್ದು. ಹಾಗಾಗಿ stringent ಆಗಿ control ಬರುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಕೇಂದ್ರ ಸರ್ಕಾರ ಕೊಟ್ಟಿರತಕ್ಕಂಥದ್ದಕ್ಕೆ

ನಾವು ಎಲ್ಲ ಕಾನೂನು ಮಾಡುವುದಕ್ಕೆ ಸಾಧ್ಯವಿಲ್ಲವೋ ಕೇಂದ್ರ ಸರ್ಕಾರ ತಂದಿರತಕ್ಕಂಥ ಕಾನೂನಿನಲ್ಲಿ encroach ಮಾಡುವುದಕ್ಕೆ ಅಧಿಕಾರ ಇಲ್ಲವೋ ಅಂತಹ ಕಾನೂನಿನಲ್ಲಿ ನಾವು building bye-laws ನಲ್ಲಿ ತರುವಂಥ ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅದೂ ಕೂಡ ರೆಡಿಯಾಗಿದೆ. ಆದರೆ ಬೇರೆ ರಾಜ್ಯದಲ್ಲಿ ಯಾವ ರೀತಿಯಾಗಿದೆ ಎಂದು ನೋಡಲಾಗಿದೆ. ಆಂಧ್ರಪ್ರದೇಶದಲ್ಲಿ ಯಾವ ರೀತಿಯಾಗಿದೆ ಎಂದು ನಾನೇ ಖುದ್ದಾಗಿ ತರಿಸಿ ನೋಡಿದ್ದೇನೆ. ಆಂಧ್ರದಲ್ಲಿಯೂ ಕೂಡ ಇದೇ ರೀತಿ ಸಮಸ್ಯೆ ಇದೆ. ಬೇರೆ ಬೇರೆ ರಾಜ್ಯದಲ್ಲಿ ಸಮಸ್ಯೆ ಇದೆ. ಅಲ್ಲಿಯೂ ಕೂಡ ಪ್ರಯತ್ನ ಮಾಡಲು ನಮ್ಮಿಂದಲೂ Exchange ಮಾಡಿಕೊಳ್ಳುತ್ತಿದ್ದಾರೆ. ಹಾಗಾಗಿ ಅವರು ತಂದಿರುವಂತಹ guidelines ಅನ್ನು ನಾವು ರೆಡಿ ಮಾಡಿದ್ದೇವೆ. ಅಂತಿಮವಾಗಿ ಇನ್ನು ಎರಡು ತಿಂಗಳೊಳಗಾಗಿ ಅದನ್ನು ಜಾರಿಗೊಳಿಸುತ್ತಾರೆ. ಜಾರಿಗೊಳಿಸುವ ಮೊದಲು ನಿಮ್ಮ ಹತ್ತಿರ ಚರ್ಚೆ ಮಾಡುತ್ತೇವೆ."guidelines for new telecommunication infrastructure towers" ಎಂದು heading ನಲ್ಲಿ ಹಾಕಿ ಮಾಡಿದ್ದೇವೆ. ಆ ಕಾರಣಕ್ಕೋಸ್ಕರ ನಿಮ್ಮ ಕಳಕಳಿ ನಮಗೆ ಅರ್ಥವಾಗುತ್ತದೆ. ಇದು ಸೀಮಿತವಾಗಿರುವಂಥದ್ದು. Building ಎಂದರೆ ಏನು ಎನ್ನುವುದಕ್ಕೋಸ್ಕರ, ಅದು Municipalities Act, Corporation Act ನಲ್ಲಿ ಮಾತ್ರ amendment ನಲ್ಲಿ ಈ towers ಅನ್ನು ಸೇರಿಸುವುದಕ್ಕೆ ಪ್ರಯತ್ನಪಟ್ಟಿರುವುದನ್ನು ಬಿಟ್ಟರೆ ಇವತ್ತು health hazardous ಆಗಲಿ, ಇನ್ನೊಂದಾಗಲಿ ಯಾವುದೂ ಕೂಡ ಇದರಲ್ಲಿ ಇಲ್ಲ. Building bye-laws ನಲ್ಲಿ ತರುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಇನ್ನೊಂದು, "Fixation of standards, exposure of limits of radio frequency. field emissions from the mobile based stations, monitoring thier compliances, all radiation related technical issues, issues access, service licenses, infrastructure provider registration by SACFA clearance for the fgrequency allocation at any location are dealt by the Department of Telecomunication that is Government of india." ನೀವು ಹೇಳುತ್ತಿರುವ aspects ಎಲ್ಲಾ ಕೇಂದ್ರ ಸರ್ಕಾರದ ಕಾನೂನಿನ ಪರಿಮಿತಿಯಲ್ಲಿ ಬರತಕ್ಕಂಥದ್ದು. ಹಾಗಾಗಿ ನಾವು ಕಾನೂನನ್ನು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ದಯಮಾಡಿ ಅರ್ಥ ಮಾಡಿಕೊಳ್ಳಿ. ನಾವು ಸಭೆಯಲ್ಲಿ ಚರ್ಚೆ ಮಾಡಿದಂತಹ ಹಿನ್ನಲೆಯಲ್ಲಿ ಇದನ್ನು ನಮ್ಮದೇ ಆದಂತಹ Building bye-laws ಮಾಡುವಾಗ ಅದರಲ್ಲಿ ಅಡಕ ಮಾಡುವಂತಹ ಕೆಲಸವನ್ನು ಮಾಡುತ್ತೇವೆ. ದಯಮಾಡಿ ಇದಕ್ಕೆ ಒಪ್ಪಿಗೆ ನೀಡಿ.

ಶ್ರೀ ಎಸ್. ಸುರೇಶ್ ಕುಮಾರ್ : ನಾವು ಇದನ್ನು ಒಪ್ಪಿಕೊಳ್ಳುತ್ತೇವೆ. ಈಗ ಇದನ್ನು ಮಾಡಬೇಕೆಂದೂ ಆಗಿದೆ. ಆದರೆ ನಾನು ಸಚಿವರಲ್ಲಿ ಕೇಳುವುದೇನೆಂದರೆ, ದಯವಿಟ್ಟು ಇದರ

urgency ಯನ್ನು ತಾವು ಅರ್ಥ ಮಾಡಿಕೊಳ್ಳಿ. Every day ಅವರು ಹಾಕುತ್ತಾರೆ. ನಮ್ಮೆಲ್ಲರಿಗೂ ಕೂಡ ಅದೊಂದು ದೊಡ್ಡ ಸಮಸ್ಯೆ. ಅದಕ್ಕೋಸ್ಕರ ಎರಡು ತಿಂಗಳು ಎಂದು ಇಟ್ಟುಕೊಳ್ಳದೇ at the earliest ಜನವರಿಯೊಳಗೆ ಇದನ್ನು ತಂದು ಮಾಡಿದರೆ ಜನಕ್ಕೆ ಒಂದು ಪರಿಹಾರ, ಉತ್ತರ ಕೊಡಬಹುದು. one solution will be there ಅದನ್ನು ದಯವಿಟ್ಟು ಮಾಡಿ.

ಶ್ರೀ ಎಲ್.ಎ. ರವಿಸುಬ್ರಹ್ಮಣ್ಯ : ಮಾನ್ಯ ಅಧ್ಯಕ್ಷರೆ, tower ಹಾಕಬೇಕಾದರೆ ಅಕ್ಕಪಕ್ಕದವರಿಂದ NOC ಯನ್ನು ತೆಗೆದುಕೊಳ್ಳಲಿ. ಮನೆಯ ಪಕ್ಕದಲ್ಲಿ tower ಹಾಕಬೇಕಾದರೆ ಅವರಿಗೂ ಗೊತ್ತಿರುವುದಿಲ್ಲ. ಇದರ ಕಡೆ ಸ್ವಲ್ಪ ಗಮನ ಕೊಡುವುದು ಒಳ್ಳೆಯದು.

ಶ್ರೀ ಕೆ. ಗೋಪಾಲಯ್ಯ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ಮಹಾಲಕ್ಷ್ಮಿಲೇಔಟ್‌ನಲ್ಲಿ ಎರಡು ಕಡೆ ಸಾವು–ನೋವು ಆಗಿದೆ. ಇದು ಮಾನ್ಯ ಸುರೇಶ್ ಕುಮಾರ್‌ರವರಿಗೂ ಗೊತ್ತು. ಮನೆ ಖಾಲಿ ಮಾಡಿಕೊಂಡು ಬೇರೆ ಕಡೆ ಹೋಗಿದ್ದಾರೆ. ನಂದಿನಿ ಥಿಯೇಟರ್ ಹತ್ತಿರ ಇದರಿಂದ ಒಂದು ಮಗು ಸಾವಾಗಿರುವುದರಿಂದ ಮನೆಯನ್ನು ಖಾಲಿ ಮಾಡಿಕೊಂಡು ಹೋಗಿದ್ದಾರೆ. ಆನಂತರ ಟವರ್‌ಅನ್ನು change ಮಾಡಿದ್ದಾರೆ. ಅಕ್ಕಪಕ್ಕದಲ್ಲಿ ವಾಸ ಮಾಡುವಂತಹ ಮನೆಯವರ NOC ತೆಗೆದುಕೊಳ್ಳದೇ ಹೋದರೆ ಕೆಲವು ಜನರಿಗೆ ಖಂಡಿತವಾಗಿಯೂ ಅದರಿಂದ ತೊಂದರೆಯಾಗುತ್ತದೆ. ಅದರಲ್ಲಿಯೂ ವಿಶೇಷವಾಗಿ ಎಲ್ಲಿ ಮಹಾನಗರಗಳು ಇವೆ, ಮೈಸೂರು ಇರಬಹುದು, ಬೆಂಗಳೂರು ಇರಬಹುದು, ದಾವಣಗೆರೆ ಇರಬಹುದು, ಹುಬ್ಬಳ್ಳಿ–ಧಾರವಾಡ ಇರಬಹುದು, ಬೆಳಗಾಂ ಇರಬಹುದು, ಇಂತಹ ಪ್ರದೇಶಗಳಲ್ಲಿ ಖಂಡಿತವಾಗಿಯೂ ತೊಂದರೆಯಾಗುತ್ತದೆ. ಇದನ್ನು ನೋಡಿಕೊಂಡು ಒಂದು ಬಾರಿ ಅಧ್ಯಯನ ಮಾಡಿ ಬೇಕಾದರೆ ಬೆಂಗಳೂರು ಸಿಟಿಯಲ್ಲಿ ಎಲ್ಲೆಲ್ಲಿ ಟವರನ್ನು ಅಳವಡಿಸಿದ್ದಾರೆ, ಅಂತಹ ಕಡೆ ನಿಮಗೆ ನಂಬಿಕೆ ಇರುವವರನ್ನು ಕಳುಹಿಸಿ ಸುತ್ತಮುತ್ತಲಿನ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳಿ.

ಶ್ರೀ ಕೆ. ಶಿವಮೂರ್ತಿ : ಹಕ್ಕಿ, ಪಕ್ಷಿಗಳು tower ನಿಂದಲೇ ಸಾಯುತ್ತಿವೆ.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2014ನೇ ಸಾಲಿನ ಕರ್ನಾಟಕ ಪೌರಸಭೆಗಳು ಮತ್ತು ಇತರೆ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

2 ಮತ್ತು 3ನೇ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

2 ಮತ್ತು 3ನೇ ಖಂಡಗಳು ವಿಧೇಯಕದ ಅಂಗವಾದವು.

ಮೊದಲನೆ ಖಂಡ ಹೆಸರು ಮತ್ತು ಅವತರಣಿಕೆ

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಅಂಗೀಕಾರ ಪ್ರಸ್ತಾವ

ಅಧ್ಯಕ್ಷರು : ಮಾನ್ಯ ಸಚಿವರು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬಹುದು.

ಶ್ರೀ ಟಿ.ಬಿ. ಜಯಚಂದ್ರ : (ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪಶುಸಂಗೋಪನೆ ಮತ್ತು ಮುಜರಾಯಿ ಸಚಿವರು (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಪೌರಸಭೆಗಳು ಮತ್ತು ಇತರೆ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆಯು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2014 ನೇ ಸಾಲಿನ ಕರ್ನಾಟಕ ಪೌರಸಭೆಗಳು ಮತ್ತು ಇತರೆ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆಯು ಅಂಗೀಕರಿಸಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಅನುಬಂಧ–3)

ಪರ್ಯಾಲೋಚನಾ ಪ್ರಸ್ತಾವ

2. ಕರ್ನಾಟಕ ಭೂ ಸುಧಾರಣೆ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2014

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಭೂ ಸುಧಾರಣೆ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.